## ರೋಗ ಪತ್ತೆಗೆ ‘ಯಂತ್ರ’

ರೋಗ ಅಂಟಿ ಆರೋಗ್ಯ ಕೆಡುವ ಮುನ್ನವೇ ರೋಗದ ಲಕ್ಷಣ ಪತ್ತೆ ಹಚ್ಚುವ ಯಂತ್ರವನ್ನು ಇಂಗ್ಲೆಂಡ್‌ನ ಇಂಪೀರಿಯಲ್ ಕಾಲೇಜಿನ ಸಂಶೋಧಕರು ಆವಿಷ್ಕರಿಸಿದ್ದಾರೆ.

‘ಹಲವಾರು ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಲು ಈ ಯಂತ್ರ ಸಹಾಯ ಮಾಡುತ್ತದೆ. ರೋಗಾಣು ದೇಹದಲ್ಲಿ ಪ್ರವೇಶ ಪಡೆದು ತನ್ನ ಪ್ರಭಾವ ಬೀರುವ ಮುನ್ನವೇ, ಸೂಕ್ಷ್ಮ ಪರೀಕ್ಷೆಯಿಂದ (ultra-sensitive test) ರೋಗದ ಇರುವಿಕೆಯನ್ನು ಹೊಸ ತಂತ್ರಜ್ಞಾನದ ಯಂತ್ರದ ಸಹಾಯದಿಂದ ಪತ್ತೆ ಹಚ್ಚಬಹುದು’ ಎಂದು ಸಂಶೋಧಕರ ತಂಡ ಹೇಳಿದೆ.

‘ಬಯೋ ಸೆನ್ಸರ್ ಮೂಲಕ ದೇಹದಲ್ಲಿ ಇರುವ ರೋಗಾಣುಗಳ ಕ್ರಿಯೆಯನ್ನು ಗುರುತಿಸಲಾಗುತ್ತದೆ. ಈಗಾಗಲೇ ಹಲವು ರೋಗಗಳನ್ನು ವಿವಿಧ ಯಂತ್ರಗಳ ಬಳಕೆಯಿಂದ ಗುರುತಿಸಲಾಗುತ್ತಿದೆ. ಆದರೆ ಅದರಲ್ಲಿ ಅಷ್ಟು ಸೂಕ್ಷ್ಮತೆಯನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲ. ನೂತನವಾಗಿ ನಿರ್ಮಿಸಿರುವ ‘ಯಂತ್ರ’ ರೋಗವನ್ನು ನಿಖರವಾಗಿ ಗುರುತಿಸಬಲ್ಲದು, ಇದರಿಂದ ಚಿಕಿತ್ಸೆ ಸುಲಭ ಮಾತ್ರವಲ್ಲ ಫಲಿತಾಂಶವೂ ಖಚಿತ’ ಎಂಬುದು ಸಂಶೋಧಕರ ವಾದ. ಮೂತ್ರಕೋಶದಲ್ಲಿನ ಕ್ಯಾನ್ಸರ್ ಕೂಡ ಇದರಲ್ಲಿ ಗೊತ್ತಾಗುತ್ತದೆ ಎಂದು ಅವರು ಹೇಳಿದ್ದಾರೆ.

## ‘ಏಡ್ಸ್’ ಕೀಟ

‘ಏಡ್ಸ್’ ರೋಗವನ್ನು ರಕ್ತ ಹೀರುವ ಕೀಟ ಪಸರಿಸುತ್ತಿದೆ! ಹೌದು ಅಮೆರಿಕದಲ್ಲಿ ಹೊಸ ಬಗೆಯ ಕೀಟವೊಂದು ಜನಿಸಿದೆ. ಅದಕ್ಕೆ ‘ಅಮೆರಿಕದ ಹೊಸ ಏಡ್ಸ್’ ಎಂದು ನಾಮಕರಣ ಮಾಡಲಾಗಿದೆ.

ಏಕೆಂದರೆ, ರಕ್ತವನ್ನು ಆಹಾರವಾಗಿ ಸೇವಿಸುವ ಈ ಕೀಟ ಆಹಾರಕ್ಕೆ ಬೇಟೆ ಆಡುವ ಜೊತೆಗೆ ರೋಗಾಣುಗಳನ್ನು ಬಿತ್ತುತ್ತದೆ. ಅನುವಂಶೀಯವಾಗಿಯೂ ಹಬ್ಬುವ ಈ ಕಾಯಿಲೆ ಅಂಟಿರುವುದೇ ಗೊತ್ತಾಗುವುದಿಲ್ಲ. ಆದ್ದರಿಂದ ಅದಕ್ಕೆ ‘ಹೊಸ ಏಡ್ಸ್’ ಎಂದು ಕರೆದಿದ್ದಾರೆ.

ರೋಗಾಣುಗಳು ಹೃದಯ ಅಥವಾ ಜಠರವನ್ನು ತನ್ನ ಕಾರಸ್ಥಾನ ಮಾಡಿಕೊಳ್ಳುತ್ತವೆ. ಅಂಗಾಂಗಗಳಲ್ಲಿ ನೆಲೆಸಿರುವ ರೋಗಾಣುಗಳು ಕ್ರಮೇಣ ಅಂಗಾಂಗಗಳ ಕ್ರಿಯೆಯನ್ನೇ ನಿಷ್ಕ್ರಿಯಗೊಳಿಸುತ್ತವೆ. ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ರೋಗಿ ಬದುಕಿ ಉಳಿಯುವುದಿಲ್ಲ.

## ಪ್ಯಾರಾಸಿಟಮೋಲ್ ಪೀಡೆ

ಸುಮಾರು ನೂರರಲ್ಲಿ ಇಪ್ಪತ್ತೈದರಷ್ಟು ಯುವಜನರ ಆರೋಗ್ಯಕ್ಕೆ ನೆರವಾಗುವ ‘ಪ್ಯಾರಾಸಿಟಮೋಲ್’ (paracetamol) ಮಾತ್ರೆಗಳನ್ನು ಅಧಿಕ ಪ್ರಮಾಣದಲ್ಲಿ ಸೇವಿಸಿ ತಮ್ಮ ಜೀವಕ್ಕೆ ತಾವೇ ಎರವು ತಂದುಕೊಳ್ಳುತ್ತಿದ್ದಾರೆ ಎಂದು ಇಂಗ್ಲೆಂಡ್‌ನ ವೈದ್ಯರು ಆತಂಕ ವ್ಯಕ್ತಪಡಿಸಿದ್ದಾರೆ. ಶೀತ– ನೆಗಡಿ, ಜ್ವರಕ್ಕೆ ಬಳಕೆಯಾಗುವ ಆ ಮಾತ್ರೆಯನ್ನು ಪ್ರಾಪ್ತ ವಯಸ್ಕರು 24 ಗಂಟೆಯ ಅವಧಿಯಲ್ಲಿ ಗರಿಷ್ಠ 4 ಗ್ರಾಮ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ಸೇವಿಸಬಾರದು.

ವೈದ್ಯರು ಶಿಫಾರಸು ಮಾಡುವಾಗ ಕೂಡ ಅದನ್ನು ಹೇಳಿರುತ್ತಾರೆ. ಆದರೆ, ವೈದ್ಯರ ಸಲಹೆಯನ್ನು ಮೀರಿ ತಮಗೆ ತಿಳಿದಂತೆ ಮಾತ್ರೆ ತೆಗೆದುಕೊಳ್ಳುವ ಅಭ್ಯಾಸ ಸಹಜವಾಗಿದೆ. ಸುಮಾರು ಸಂದರ್ಭದಲ್ಲಿ ತಾವೇ ತಮ್ಮ ಕಾಯಿಲೆಯ ಸ್ವರೂಪವನ್ನು ನಿರ್ಧರಿಸಿ ಔಷಧ ತೆಗೆದುಕೊಳ್ಳುತ್ತಾರೆ. ಅತಿಸಾಮಾನ್ಯ ಕಾಯಿಲೆಗಳಿಗೆ ‘ಪ್ಯಾರಾಸೆಟಮೋಲ್’ ದಿವ್ಯೌಷಧ, ಹಾಗಾಗಿ ಬಹುತೇಕರು ಅದನ್ನು ತೆಗೆದುಕೊಳ್ಳುತ್ತಾರೆ.

ಮಿತಿ ಮೀರಿ ಅದನ್ನು ಸೇವಿಸುವುದರಿಂದ ಯಕೃತ್‌ಗೆ ತೊಂದರೆಯಾಗುತ್ತದೆ. ಕೆಲವೊಬ್ಬರು ವಿಪರೀತ ತಲೆ ನೋವು– ಜ್ವರ ಎಂದು ಒಂದೇ ಬಾರಿಗೆ ಎರಡು ಮಾತ್ರೆಯನ್ನು ತೆಗೆದುಕೊಳ್ಳುತ್ತಾರೆ. ಅದು ತುಂಬಾ ಅಪಾಯಕಾರಿ. 500ಎಂ.ಜಿ.ಯ ಒಂದು ಮಾತ್ರೆ ಸೇವಿಸಿದ ನಂತರ ಐದಾರು ಗಂಟೆಯ ಒಳಗೆ ಮತ್ತೊಂದು ಮಾತ್ರೆ ತೆಗೆದುಕೊಳ್ಳಲೇ ಬಾರದು ಎಂದು ಅವರು ಸಲಹೆ ನೀಡಿದ್ದಾರೆ.

–ಟಿಪ್ಸ್




